ಕಾರ್ಯಯೋಜನೆಯನ್ನು ಹಾಕಿಕೊಂಡಿದ್ದು ಸದರಿ ಕಾರ್ಯ ಯೋಜನೆಯ ಮೇರೆಗೆ 2001-02ನೇ ಸಾಲಿನಲ್ಲಿ ಚಿಕ್ಕೋಡಿ ಘಟಕಕ್ಕೆ ಸೇರಿದ 4 ವಾಹನಗಳನ್ನು ನಿಷ್ಕ್ರಿಯಗೊಳಿಸಲಾಗಿದ್ದು 9 ಹೊಸ ವಾಹನಗಳನ್ನು ಘಟಕಕ್ಕೆ ನೀಡಲಾಗಿರುತ್ತದೆ ಇದಲ್ಲದೇ ವಾಹನಗಳ ದುರಸ್ತಿ ನಿರ್ವಾಹಣೆ ಕಾರ್ಯಗಳ ಗುಣಮಟ್ಟವನ್ನು ಉತ್ತಮಪಡಿಸಿ ಸುಸ್ಥಿತಿಯಲ್ಲಿರುವ ವಾಹನಗಳನ್ನೇ ಮಾರ್ಗದ ಮೇಲೆ ಕಳುಹಿಸಲು ಕ್ರಮ ಕೈಗೊಳ್ಳಲಾಗಿದ್ದು, ಪ್ರಯಾಣಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ

ಆ) ಚಿಕ್ಕೋಡಿ ಘಟಕಕ್ಕೆ 2 ಉತ್ತಮವಾದ ಸುವಿಹಾರ ಬಸ್ಸುಗಳನ್ನು ನೀಡಲಾಗಿದ್ದು ಅವು ಇಚಲಕರಂಜಿ ಚಿಕ್ಕೋಡಿ-ಬೆಂಗಳೂರು ಮಾರ್ಗದ ಮೇಲೆ ಕಾರ್ಯಚರಣೆಗೊಳಿಸಲಾಗುತ್ತಿದೆ

ಇ) ಸಧ್ಯಕ್ಕೆ ಈ ತರಹದ ಹೆಚ್ಚುವರಿ ವಾಹನಗಳನ್ನು ಒದಗಿಸುವ ಯೋಜನೆಯು ಇರುವುದಿಲ್ಲ

ಬೈಲಹೊಂಗಲ ಘಟಕದಲ್ಲಿ ನಿಯಮಿತವಾಗಿ ಬಸ್ ಓಡಿಸದೇ ಇರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 76(341)

ಸದಸ್ಯರ ಹೆಸರು ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್ (ಸಾರಿಗೆ ಸಚಿವರು)

ಪ್ರಶ್ನೆ

ಅ) ಬೆಳಗಾವಿ ವಿಭಾಗದ ಬೈಲಹೊಂಗಲದ ಘಟಕದಲ್ಲಿ ಕಲೆದ 1 ವರ್ಷದಿಂದ ನಿಯಮಿತವಾಗಿ ಹಾಗೂ ನಿಗದಿತ ವೇಳೆಗೆ ಸರಿಯಾಗಿ ಬಸ್‌ಗಳನ್ನು ಓಡಿಸದೇ ಇರುವುದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರ ಗಮನಕ್ಕೆ ಬಂದಿದೆಯೇ?

ಆ) ಮೇಲಿಂದ ಮೇಲೆ ಬಸ್‌ಗಳ ರೂಟ್‌ಗಳನ್ನು ರದ್ದುಪಡಿಸುತ್ತಿರುವುದರಿಂದ ಹಾಗೂ ಪ್ರಯಾಣಿಕರಿಗೆ ಯಾವುದೇ ಮುನ್ಸೂಚನೆ ಕೊಡದೇ ಬಸ್ ರೂಟ್‌ಗಳನ್ನು ಒದಲಾಯಿಸುತ್ತಿರುವುದರಿಂದ ಸಾರ್ವಜನಿಕರು ಕಡ್ಡಾಯವಾಗಿ ಟ್ಯಾಕ್ಸಿಗಳನ್ನು ಹತ್ತುವಂತೆ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬೈಲಹೊಂಗಲ ಘಟಕದವರು ನಿಷ್ಕ್ರಿಯವಾದ ಬಸ್‌ಗಳನ್ನು ಓಡಿಸುತ್ತಿದ್ದು, ಅವು ಮಾರ್ಗ ಮಧ್ಯದಲ್ಲಿ ಕೆಟ್ಟು ನಿಲ್ಲುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಈ ವರ್ಷದಲ್ಲಿ ಪ್ರತಿ ತಿಂಗಳು ರಸ್ತೆಯ ಮೇಲೆ ಎಷ್ಟು ಬಸ್‌ಗಳು ಕೆಟ್ಟು ನಿಂತಿರುವುವು ಈ ಬಸ್‌ಗಳನ್ನು ಬದಲಾಯಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉತ್ತರ

ಅ) ಕೆಲವೊಮ್ಮೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ

ಆ) ಹೌದು ಬೈಲಹೊಂಗಲದಿಂದ 92 ಅನುಸೂಚಿಗಳು ಕಾರ್ಯಾಚರಣೆ ಮಾಡುತ್ತಿದ್ದು ಕೆಲವೊಂದು ಮಾರ್ಗಗಳಲ್ಲಿ ಆದಾಯ ತೀರಾ ಇಳಿಮುಖವಾಗಿರುವುದರಿಂದ ರದ್ದು ಮಾಡಿದ್ದು ಮುಂಚಿತವಾಗಿ ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುತ್ತಿದೆ

ಇ) ಬೈಲಹೊಂಗಲ ಘಟಕದಲ್ಲಿ ಹಳೇ ಬಸ್ಸುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಹಳೇ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಕೊಡಲು ಕ್ರಮ ಕೈಗೊಳ್ಳಲಾಗಿದೆ ಈಗಾಗಲೇ 6 ಹಳೇ ಬಸ್ಸುಗಳನ್ನು ಬದಲಾಯಿಸಿ 7 ಹೊಸ ಬಸ್ಸುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ

ಬೈಲಹೊಂಗಲ ಘಟಕದಲ್ಲಿ ಒಟ್ಟಾರೆ ಏಪ್ರಿಲ್ 2001 ರಿಂದ ಡಿಸೆಂಬರ್ 2001ರ ವರೆಗೆ 83 ಅವಘಡಗಳು ಸಂಭವಿಸಿದ್ದು ವಿವರಗಳು ಈ ಕೆಳಗಿನಂತಿವೆ

ಮಾಹೆ	ಅವಘಡಗಳ ಸಂಖ್ಯೆ
ಏಪ್ರಿಲ್ 2001	10
ಮೇ 2001	08
ಜೂನ್ 2001	10
ಜುಲೈ 2001	08
ಆಗಸ್ಟ್ 2001	13
ಸೆಪ್ಟಂಬರ್ 2001	09
ಅಕ್ಟೋಬರ್ 2001	09

ನವೆಂಬರ್ 2001	09
ಡಿಸೆಂಬರ್ 2001	07
	83

ದೊಡ್ಡಬಳ್ಳಾಪುರದಲ್ಲಿ ಅಗ್ನಿಶಾಮಕ ರಾಣೆ ತೆರೆಯುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 77(02)

ಸದಸ್ಯರ ಹೆಸರು ಶ್ರೀ ಎ ಕೃಷ್ಣಪ್ಪ(ದೊಡ್ಡಬಳ್ಳಾಪುರ)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ದೊಡ್ಡಬಳ್ಳಾಪುರ ತಾಲ್ಲೂಕು ಕೈಗಾರಿಕಾ ಪ್ರದೇಶವಾಗಿದ್ದು, ನಗರದಲ್ಲಿ ನೇಕಾರರ ಮಗ್ಗಗಳೇ ಹೆಚ್ಚಾಗಿದ್ದು, ಅಗ್ನಿ ಅನಾಹುತಗಳಾದಾಗ ನಂದಿಸಲು ''ಅಗ್ನಿಶಾಮಕ ರಾಣೆ'' ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಗ್ನಿಶಾಮಕ ರಾಣೆ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಇದರ ನಿಯಾಮಾವಳಿಗಳನ್ನು ನಮೂದಿಸುವುದು)

ಉತ್ತರ

ಅ) ಹೌದು

ಆ) ಸರ್ಕಾರದ ಆದೇಶ ಸಂಖ್ಯೆ ಒಇ 130 ಕಅಸೇ 95, ದಿನಾಂಕ 6-3-96ರಲ್ಲಿ ದೊಡ್ಡಬಳ್ಳಾಪುರ ಪಟ್ಟಣದಲ್ಲಿ ಅಗ್ನಿಶಾಮಕ ರಾಣೆ ತೆರೆಯಲು ಮಂಜೂರಾತಿ ನೀಡಲಾಗಿದೆ ಸೂಕ್ತ ನಿವೇಶನ ಅಥವಾ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ ತಾತ್ಕಾಲಿಕ ಕಟ್ಟಡಗಳು ಲಭ್ಯವಾದ ಕೂಡಲೇ ಅಗ್ನಿಶಾಮಕ ರಾಣೆಯನ್ನು ಪ್ರಾರಂಭಿಸಲಾಗುವುದು

ತ್ವರಿತ ನ್ಯಾಯಾಲಯ ಸ್ಥಾಪನೆ